ಅನೇಕ ವರ್ಷಗಳಿಂದ ಜವಿೂನನ್ನು ಉಪಯೋಗಿಸದಿರುವ ಬಗ್ಗೆ

೧೪೭೯. ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ ಖಾತೆಯ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ ?

(ಅ) ಕೃಷಿ ಕ್ಷೇತ್ರವನ್ನು ಪ್ರಾರಂಭಿಸಲು ರೇಷ್ಮೆ ಇಲಾಖೆಯವರು ಚಿಕ್ಕಸಿವಾರದ ಹತ್ತಿರ ಸುವಾರು ೨೦ ಎಕರೆ ರಾಜಸ್ವ ಜವಿೂನನ್ನು ಹತ್ತು ವರ್ಷಗಳ ಹಿಂದೆ ಸ್ವಾಧೀನಕ್ಕೆ ತೆಗೆದುಕೊಂಡಿರುವರೆ?

(ಆ) ಇನ್ನೂ ಕೃಷಿ ಕ್ಷೇತ್ರವನ್ನು ಪ್ರಾರಂಭಿಸದೇ ಇರುವುದಕ್ಕೆ ಕಾರಣಗಳೇನು ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು).—

(ಅ) ಹೌದು

(ಆ) ಹಣದ ಕೊರತೆಯಿಂದ

ಬಿಜಾಪುರ ನಗರದಲ್ಲಿರುವ ಸ್ಮಾರಕಗಳ ಸಂರಕ್ಷಣೆ

೧೪೭೯. ಶ್ರೀ ಎನ್. ಎಸ್. ಬೇಡ್ (ಇಂಡಿ) —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ವಿಶ್ವದಲ್ಲಿನ ಪ್ರಮುಖ ಐತಿಹಾಸಿಕ ಪ್ರದೇಶಗಳಲ್ಲಿ ಬಿಜಾಪುರ ನಗರವು ಒಂದು ಎಂಬುವ ಅಂಶವು ಸರಕಾರಕ್ಕೆ ತಿಳಿದಿದೆಯೆ,

(ಆ) ಈಗ ಈ ನಗರದಲ್ಲಿ ದೊರೆಯುತ್ತಿರುವ ಸಾರ್ವಜನಿಕ ಸೌಲಭ್ಯಗಳೇನು ?

(ಇ) ವಿಶ್ವದಲ್ಲಿನ ಸಾವಿರಾರು ಯಾತ್ರಿಗಳನ್ನು ಬಿಜಾಪುರ ನಗರವು ಆಕರ್ಷಿಸುತ್ತಿರುವುದು ನಿಜವೇ,

(ಈ) ನಗರದಲ್ಲಿ ಈಗ ಇರುವ ತೆರವು ಬಾವಿಗಳನ್ನು ಉಪಯೋಗಿಸಿಕೊಂಡು ವಿಶ್ವ ಪ್ರಸಿದ್ಧಿ ಪಡೆದ ಸ್ಮಾರಕಗಳ ಸುತ್ತಲೂ ಇರುವ ಸುಂದರ ಉದ್ಯಾನವನಗಳನ್ನು ಸಂರಕ್ಷಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ,

(ಉ) ಹಾಗಿದ್ದಲ್ಲಿ, ಸರಕಾರವು ಈ ವಿಷಯದ ಬಗ್ಗೆ ತೆಗೆದುಕೊಳ್ಳಲಿರುವ ಕ್ರಮವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—

(ಅ) ಹೌದು

(ಆ) ನಗರಸಭೆಯು ಈ ಕೆಳಕಂಡ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುತ್ತಿದೆ.

೧. ನೀರು ಪೂರೈಕೆ ವ್ಯವಸ್ಥೆ
೨. ರಸ್ತೆ ದೀಪಗಳು
೩. ಒಳಚರಂಡಿ ವ್ಯವಸ್ಥೆ
೪. ರಸ್ತೆಗಳ ವ್ಯವಸ್ಥೆ
೫. ನಗರದ ಶುಚಿತ್ವ ಮತ್ತು ಆರೋಗ್ಯ ರಕ್ಷಣೆ ವ್ಯವಸ್ಥೆ
೬. ಕರ್ನಾಟಕ ಪುರಸಭೆಗಳ ಅಧಿನಿಯಮದಂತೆ ನಿರ್ವಹಿಸಬೇಕಾದ ಕಾರ್ಯಗಳು

(ಇ) ಪ್ರವಾಸಿಗರು ಬಿಜಾಪುರಕ್ಕೆ ಭೇಟಿ ಕೊಡುತ್ತಾರೆ

(ಈ) ಸ್ಮಾರಕಗಳು ಮತ್ತು ಅವುಗಳ ಸುತ್ತ ಇರುವ ಉದ್ಯಾನವನಗಳು ಭಾರತ ಸರ್ಕಾರದ ಆರ್ಕಿಯಾಲಾಜಿಕಲ್ ಸರ್ವೆ ಇಲಾಖೆಯ ಅಧೀನದಲ್ಲಿವೆ

(ಉ) ಉದ್ಭವಿಸುವುದಿಲ್ಲ